64

# ಕರ್ನಾಟಕ ವಿಧಾನಪರಿಷತ್ತು

1. ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ : 854
2. ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 13.03.2025.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರದ ಹಣಕಾಸು ಸ್ಥಿತಿಗತಿ, ತೆರಿಗೆ ರಾಜಸ್ವ ಸಂಗ್ರಹದ ಪರಿಪೂರ್ಣ ವಿವರಗಳೇನು | 2024-25ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ರಾಜ್ಯದ ರಾಜಸ್ವ ಸಂಗ್ರಹಣೆಯು 2,57,801 ಕೋಟಿ ರೂ.ಗಳು ಎಂದು ಅಂದಾಜಿಸಲಾಗಿದೆ. ಫೆಬ್ರುವರಿ ತಿಂಗಳ ಅಂತ್ಯದವರೆಗೆ ಒಟ್ಟು 2,26,034 ಕೋಟಿ ರೂ.ಗಳು ಸ್ವೀಕೃತವಾಗಿದ್ದು, ಶೇ.87.7ರಷ್ಟು ರಾಜಸ್ವ ಸಂಗ್ರಹಣೆಯ ಗುರಿ ತಲುಪಿರುತ್ತದೆ.<br><br>ವೆಚ್ಚಕ್ಕೆ ಸಂಬಂಧಿಸಿದಂತೆ ಫೆಬ್ರುವರಿ ತಿಂಗಳ ಅಂತ್ಯದವರೆಗೆ ಒಟ್ಟು 2,90,402 ಕೋಟಿ ರೂ.ಗಳು ವೆಚ್ಚವಾಗಿದ್ದು, ಪರಿಷ್ಕೃತ ಅಂದಾಜಿನ ಶೇ.79.4ರಷ್ಟು ವೆಚ್ಚವಾಗಿರುತ್ತದೆ.<br><br>ರಾಜಸ್ವ ಸಂಗ್ರಹಣೆ ಹಾಗು ವೆಚ್ಚಗಳು ಪರಿಷ್ಕೃತ ಅಂದಾಜಿನ ಗುರಿ ತಲುಪುವ ನಿರೀಕ್ಷೆಯಿದ್ದು, ರಾಜಸ್ವ ಸಂಗ್ರಹಣೆ ಹಾಗು ಆಯವ್ಯಯದಲ್ಲಿ ಅಂದಾಜಿಸಿರುವ ಸಾಲದ ಮಿತಿಯೊಳಗೆ ವೆಚ್ಚವನ್ನು ನಿರ್ವಹಿಸಲಾಗುವುದು.<br><br>ವಿತ್ತೀಯ ಕೊರತೆ ಹಾಗು ಒಟ್ಟು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಹೊಣೆಗಾರಿಕೆಯನ್ನು ಆರ್ಥಿಕ ಹೊಣೆಗಾರಿಕೆ ಅಧಿನಿಯಮದಲ್ಲಿ ಸೂಚಿಸಿರುವ ಮಾನದಂಡದಂತೆ ಪಾಲನೆ ಮಾಡಲಾಗುವುದು.<br><br>2024-25ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಸಂಗ್ರಹಿಸುವ ವಿವಿಧ ತೆರಿಗೆಗಳ ಸಂಗ್ರಹಣೆಯ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ | ಸರ್ಕಾರ ಹಾಕಿಕೊಂಡ ಯೋಜನೆಯಂತೆ ತೆರಿಗೆ ರಾಜಸ್ವ ಕೊರತೆಯಾಗಿದೆಯೇ;<br>ಕೊರತೆಯಾಗಿದ್ದಲ್ಲಿ,<br>ಕಾರಣಗಳೇನು | 2024-25ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದ ತೆರಿಗೆ ರಾಜಸ್ವ ಸಂಗ್ರಹಣೆಯು 1,89,893 ಕೋಟಿ ರೂ.ಗಳು ಎಂದು ಅಂದಾಜಿಸಲಾಗಿದೆ. ಫೆಬ್ರುವರಿ ತಿಂಗಳ ಅಂತ್ಯದವರೆಗೆ ಒಟ್ಟು 1,57,111 ಕೋಟಿ ರೂ.ಗಳು ಸ್ವೀಕೃತವಾಗಿದ್ದು, ಶೇ.82.7ರಷ್ಟು ತೆರಿಗೆ ರಾಜಸ್ವ ಸಂಗ್ರಹಣೆಯ ಗುರಿತಲುಪಿರುತ್ತದೆ.<br><br>ಫೆಬ್ರುವರಿ ತಿಂಗಳ ಅಂತ್ಯದವರೆಗೆ ತೆರಿಗೆ ರಾಜಸ್ವದಲ್ಲಿ ಒಟ್ಟು 16,958 ಕೋಟಿ ರೂ.ಗಳು ಕೊರತೆಯಾಗಿರುತ್ತದೆ.<br><br>ತೆರಿಗೆ ಸಂಗ್ರಹಣೆಯು ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಹೆಚ್ಚು ಅವಲಂಬಿತವಾಗಿದೆ. 2024-25ನೇ ಸಾಲಿನಲ್ಲಿ ದೇಶದ ಆರ್ಥಿಕತೆಯು ನಿರೀಕ್ಷೆಗಿಂತ ಕಡಿಮೆ ಬೆಳವಣಿಗೆ ಹೊಂದಿರುತ್ತದೆ.<br><br>ದೇಶದ ಆರ್ಥಿಕ ಪ್ರಗತಿಯಲ್ಲಿ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಇಳಿಕೆಯಾಗಿರುವುದು ರಾಜ್ಯದ ಆರ್ಥಿಕ ಚಟುವಟಿಕೆಗಳ ಮೇಲೂ ಪರಿಣಾಮಬೀರಿದೆ. ಆರ್ಥಿಕ ಚಟುವಟಿಕೆಗಳಿಗೆ ಅನುಗುಣವಾಗಿ ತೆರಿಗೆ ಸಂಗ್ರಹಣೆಯಾಗಲ್ಲಿದ್ದು, ಪ್ರಸಕ್ತವರ್ಷದಲ್ಲಿ ಆರ್ಥಿಕ ಚಟುವಟಿಕೆಗಳು ನಿರೀಕ್ಷಿತ ಮಟ್ಟಕ್ಕಿಂತ ಕಡಿಮೆ ಇರುವುದರಿಂದ ತೆರಿಗೆ ಸಂಗ್ರಹಣೆಯು ಕಡಿಮೆಯಾಗಿರುತ್ತದೆ. |
| ಇ) | ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು) | ರಾಜಸ್ವ ಸಂಗ್ರಹಣೆಯು ಆಯವ್ಯಯ ಗುರಿ ತಲುಪಲು, ಸರ್ಕಾರವು ಸಂಪನ್ಮೂಲ ಕ್ರೋಢೀಕರಣ ಕ್ರಮಗಳನ್ನು ಕೈಗೊಂಡಿರುತ್ತದೆ. ಕಾಲಾನು ಕ್ರಮದಲ್ಲಿ ದರ ಪರಿಷ್ಕರಿಸುವುದರ ಜೊತೆಗೆ, ತೆರಿಗೆ ಇಲಾಖೆಗಳಲ್ಲಿ ವಿಚಕ್ಷಣೆಯನ್ನು ಹೆಚ್ಚಿಸುವುದು, ತೆರಿಗೆ ಸೋರಿಕೆಯನ್ನು ತಡೆಯುವುದು ಹಾಗು ತೆರಿಗೆ ಅನುಸರಣೆಯನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಂಡಿರುತ್ತದೆ. ಅಲ್ಲದೆ, ತೆರಿಗೆ ಅಧಿಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಅಗತ್ಯ ತರಬೇತಿ ನೀಡುವ ಮೂಲಕ ತೆರಿಗೆ ಇಲಾಖೆಗಳನ್ನು ಬಲವರ್ಧನೆ ಮಾಡುವ ಕ್ರಮವಹಿಸಿರುತ್ತದೆ.<br><br>ಇದಲ್ಲದೆ, ರಾಜ್ಯದಲ್ಲಿ ಆರ್ಥಿಕತೆಯನ್ನು ಉತ್ತೇಜಿಸಲು ಮೂಲಭೂತ ಸೌಕರ್ಯ ಸೇರಿದಂತೆ ಬಂಡವಾಳ ಯೋಜನೆಗಳಿಗೆ ಅಗತ್ಯ ಅನುದಾನ ಒದಗಿಸುವ ಮೂಲಕ ಹೆಚ್ಚಿನ ಹೂಡಿಕೆಗಳನ್ನು ಆಕರ್ಷಿಸುವ ಕ್ರಮವಹಿಸಿರುತ್ತದೆ. ಇದರಿಂದ ರಾಜ್ಯದಲ್ಲಿ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಆರ್ಥಿಕ ಚಟುವಟಿಕೆಗಳು ಹೆಚ್ಚಾಗಲಿದ್ದು ತೆರಿಗೆ ಸಂಗ್ರಹಣೆಯೂ ಹೆಚ್ಚಾಗುವ ನಿರೀಕ್ಷೆಯಿದೆ. |

FD/51/2025-DS-BR-FINANCE DEPT.SEC

(ಸಿದ್ದರಾಮಯ್ಯ)
ಮುಖ್ಯಮಂತ್ರಿ

# ಅನುಬಂಧ-1

2024-25 ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಸಂಗ್ರಹಿಸುವ ವಿವಿಧ ತೆರಿಗೆಗಳ ರಾಜಸ್ವ ಸಂಗ್ರಹಣೆಯ ವಿವರಗಳು ಕೆಳಕಂಡಂತಿದೆ

ರೂ.ಕೋಟಿಗಳಲ್ಲಿ

| ವಿಷಯ | 2024-25 ಪರಿಷ್ಕೃತ ಅಂದಾಜಿನ ಗುರಿ | 204-25 ರ ಫೆಬ್ರವರಿ ವರೆಗಿನ ಸಂಗ್ರಹಣೆ |
|---|---|---|
| ವಾಣಿಜ್ಯ ತೆರಿಗೆ | 1,05,000 | 92,944 |
| ಅಬಕಾರಿ | 36,500 | 32,382 |
| ಮೋಟಾರು ವಾಹನ ತೆರಿಗೆ | 12,500 | 10,699 |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 24,000 | 20,163 |
| ಇತರೆ ತೆರಿಗೆ | 2,368 | 922 |
| **ಸ್ವಂತ ತೆರಿಗೆ ರಾಜಸ್ವ** | **1,80,368** | **1,57,111** |